ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE :

# ಶಾಸಕ-ಸಚಿವರೇ ಮತದಾರರಲ್ಲ!

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ವಿಧಾನಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರಕ್ಕೆ ಅ.28 ರಂದು ಮತದಾನ ನಡೆಯಲಿದ್ದು, ಬಹಿರಂಗ ಪ್ರಚಾರ ಕ್ಕೆ ತೆರೆಬಿದ್ದಿದೆ.

ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡ ಕ್ಷೇತ್ರದಲ್ಲಿ ಕೆಲವರು ಸಚಿವರನ್ನು ಒಳಗೊಂಡು 23 ಶಾಸಕರಿದ್ದಾರೆ. ಐವರು ವಿಧಾನ ಪರಿಷತ್ ಸದಸ್ಯರು, ಒಬ್ಬರು ಕೇಂದ್ರ ಸಚಿವರು ಸೇರಿ ನಾಲ್ವರು ಸಂಸದರಿದ್ದಾರೆ. ಇವರಲ್ಲಿ ಹೆಚ್ಚಿನವರು ಎಂಟು-ಹತ್ತು ದಿನಗಳಿಂದ ತಂತಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ನಿಟ್ಟಿನಲ್ಲಿ ಮತದಾರರನ್ನು ಸ್ವತಃ ಭೇಟಿಯಾಗಿ ಬೆಂಬಲ ಯಾಚಿಸಿದ್ದಾರೆ. ಆದರೆ, ಕ್ಷೇತ್ರ ವ್ಯಾಪ್ತಿಯ ಪ್ರಮುಖ ಜನಪ್ರತಿನಿಧಿಗಳಲ್ಲಿ ಅರ್ಧಕ್ಕಿಂತ ಹೆಚ್ಚಿನವರು ಈ ಚುನಾವಣೆಯಲ್ಲಿ ಮತದಾರರೇ ಅಲ್ಲ!

**» ಪಶ್ಚಿಮ ಪದವೀಧರ ಕ್ಷೇತ್ರಕ್ಕೆ ನಾಳೆ ಮತದಾನ**

ಧಾರವಾಡ ಜಿಲ್ಲೆಯಲ್ಲಿ 7 ಶಾಸಕರಿದ್ದಾರೆ. ಸಚಿವ ಜಗದೀಶ ಶೆಟ್ಟರ್, ಶಾಸಕರಾದ ಅರವಿಂದ ಬೆಲ್ಲದ, ಸಿ.ಎಂ. ನಿಂಬಣ್ಣವರ, ಅಮೃತ ದೇಸಾಯಿ ಪದವೀಧರ ಕ್ಷೇತ್ರದ ಮತದಾರರು. ಉಳಿದ ಮೂವರು ಶಾಸಕರಿಗೆ ಮತಹಕ್ಕು ಇಲ್ಲ.

ಗದಗ ಜಿಲ್ಲೆಯ ನಾಲ್ವರು ಶಾಸಕರಲ್ಲಿ ಎಚ್.ಕೆ. ಪಾಟೀಲರಿಗೆ ಮತ ಇದೆ. ಸಚಿವ ಸಿ.ಸಿ. ಪಾಟೀಲ ಮತ್ತು ಉಳಿದ ಶಾಸಕರು ಮತದಾನದ ಹಕ್ಕು ಹೊಂದಿಲ್ಲ.

ಹಾವೇರಿ ಜಿಲ್ಲೆಯ ಆರು ಶಾಸಕರಲ್ಲಿ ಸಚಿವ ಬಸವರಾಜ ಬೊಮ್ಮಾಯಿ ಹಾಗೂ ನೆಹರು ಓಲೆಕಾರ ಮತದಾನದ ಹಕ್ಕು ಹೊಂದಿದ್ದಾರೆ. ಸಚಿ[illegible] ಪಾಟೀಲ ಪದವೀಧರರಾದರೂ ನೋಂದಣಿಯನ್ನೇ ಮಾಡಿಕೊಂಡಿಲ್ಲ. ಉಳಿದ ಶಾಸಕರು ಮತದಾನಕ್ಕೆ ನೋಂದಣಿ ಮಾಡಿಕೊಳ್ಳಲು ಅರ್ಹರಲ್ಲ.

ಉತ್ತರ ಕನ್ನಡ ಜಿಲ್ಲೆಯ 6 ಶಾಸಕರಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಸಚಿವ ಆರ್.ವಿ. ದೇಶಪಾಂಡೆರ ಮಾತ್ರ ಮತ ಹೊಂದಿದ್ದಾರೆ. ಸಚಿವ ಶಿವರಾಮ ಹೆಬ್ಬಾರ ಸೇರಿ ಉಳಿದ ನಾಲ್ವರು ಶಾಸಕರು 28ರ ಎಂಎಲ್‌ಸಿ ಚುನಾವಣೆಯ ಮತದಾರರಲ್ಲ.

ಸಂಸದರಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಹಾವೇರಿ-ಗದಗ ಕ್ಷೇತ್ರದ ಶಿವಕುಮಾರ ಉದಾಸಿ ಮತಾಧಿಕಾರ ಹೊಂದಿದ್ದಾರೆ. ಉತ್ತರ ಕನ್ನಡ ಕ್ಷೇತ್ರದ ಅನಂತಕುಮಾರ ಹೆಗಡೆ ಮತ ಹೊಂದಿಲ್ಲ. ಗದಗ ಜಿಲ್ಲೆ ನರಗುಂದ ಭಾಗವನ್ನು ಒಳಗೊಂಡ ಬಾಗಲಕೋಟೆ ಸಂಸದ ಪಿ.ಸಿ. ಗದ್ದಿಗೌಡರ ಪಶ್ಚಿಮ ಪದವೀಧರ ಕ್ಷೇತ್ರ ವ್ಯಾಪ್ತಿಯ ನಿವಾಸಿಯಲ್ಲ.

## ಎಂಎಲ್‌ಸಿಗಳೂ ಪ್ರಭುಗಳೇ

**ಕ್ಷೇತ್ರದ ಎಂಎಲ್‌ಸಿಗಳೆಲ್ಲರೂ ಮತದಾರ ಪ್ರಭುಗಳೇ ಆಗಿದ್ದಾರೆ. ಹುಬ್ಬಳ್ಳಿ ವಾಸಿಗಳಾದ ಬಸವರಾಜ ಹೊರಟ್ಟಿ, ಪ್ರದೀಪ ಶೆಟ್ಟರ್, ಶ್ರೀನಿವಾಸ ಮಾನೆ, ಉತ್ತರ ಕನ್ನಡ ಜಿಲ್ಲೆಯವರಾದ ಎಸ್.ಎಲ್. ಘೋಟ್ನೇಕರ, ಶಾಂತಾರಾಮ ಸಿದ್ದಿ ಅವರು ಮತದಾರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಸಿಕೊಂಡಿದ್ದಾರೆ.**